ಸೊಸೆಯ ಕೈಗಿಟ್ಟ ಚಿದಾನಂದ.

'ಏನಾದ್ರೂ ತಗೋ ಪುಟ್ಟೀ, ಗೃಹಪ್ರವೇಶದ ನೆನಪಿಗೆ ಅಂತ ಇರುತ್ತೆ...'

'ಬೇಡ ಮಾವ. ನಿಮ್ಮ ಅಕೌಂಟಿಗೆ ಹಾಕ್ಕೊಳ್ಳಿ. ಮನೆ ಖರ್ಚು ಇದ್ದೇ ಇರುತ್ತಲ್ಲ...'

'ತಗೋ ತಗೋ, ಅದೆಲ್ಲಾ ನಡೆಯುತ್ತೆ. ಮುಂದಿನ ತಿಂಗಳಿಂದ ಎಲ್ಲಾ ಅಕೌಂಟಿಗೆ'.

'ಏನು ತಗೊಳ್ಲಿ? ನೀವೇ ಹೇಳಿ...'

'ನಿನ್ನಿಷ್ಟ. ಚಿನ್ನ ಗಿನ್ನ ಅಂತಾದ್ರೆ ಶಾಶ್ವತವಾಗಿರುತ್ತೆ...'

'ಅದಕ್ಕೇ ಮತ್ತೆ ನಿಮ್ಮ ಸಲಹೆ ಕೇಳಿದ್ದು', ಮುದ್ದಾಗಿ ಕೊರಳು ಕೊಂಕಿಸಿದಳು ಸೊಸೆ. ಅವತ್ತೇ ಗಂಡನ ಜೊತೆ ಹೋಗಿ ಮುತ್ತಿನ ಕಿವಿಯೋಲೆ, ಜುಮುಕಿಗಳನ್ನು ಕೊಂಡು ತಂದಳು. ಎಳೆ ಹುಡುಗಿಯಂತೆ ಕುಣಿಕುಣಿಯುತ್ತಾ ಹೊಸ ಕರ್ಣಾಭರಣಗಳನ್ನು ಧರಿಸಿಕೊಂಡು ಚಿದಾನಂದನ ಎದುರು ಬಂದು ನಿಂತಳು.

'ಹೇಗೆ ಕಾಣುತ್ತೆ ಮಾವ? ಚೆನ್ನಾಗುಂಟಾ?'

'ಓ, ಫಸ್ಟ್‌ಕ್ಲಾಸ್'.

'ಸತ್ಯ?'

'ಸತ್ಯ ಕಣೇ'

'ಇದೊಂದು ಆಸೆ ಇತ್ತು, ಜುಮುಕಿ ಹಾಕ್ಕೋಬೇಕು ಅಂತ. ಅಪ್ಪನ್ನ ಕೇಳಿದ್ರೆ ನಾಳೆ ನಾಳೆ ಅಂತ ಮುಂದಕ್ಕೆ ಹಾಕ್ತಿದ್ದ. ನೀವು ನನ್ನ ಆಸೆ ತೀರಿಸಿದ್ರಿ...'

'ಇದ್ಯಾವ ಮಹಾ ಆಸೆ? ಮೊದಲೇ ಹೇಳಿದ್ರೆ ಯಾವತ್ತೋ ತರಿಸಿಕೊಡ್ತಿದ್ದೆ. ಮನಸ್ಸು ಮಾಡಿದ್ರೆ ನೀನೇ ತಗೋಬಹುದಿತ್ತು' ಸೊಸೆಯ ಸಂತೋಷದಲ್ಲಿ ಭಾಗಿಯಾಗಿ ಅಕ್ಕರೆಯಿಂದ ಹೇಳಿದ ಚಿದಾನಂದ. ಮಾವ, ಸೊಸೆಯ ಅನ್ಯೋನ್ಯತೆ ಕಂಡು ಭಾರ್ಗವ ಒಳಗಿಂದೊಳಗೆ ಹಿಗ್ಗಿದ.

'ಅಪ್ಪಾ, ನೀನು ಇವಳನ್ನ ತಲೆ ಮೇಲೆ ಕೂರಿಸ್ಕೊಂಡಿದ್ದಿ. ಕೊಬ್ಬಿ ಹೋಗಿದಾಳೆ. ಸ್ವಲ್ಪ ಕಂಟ್ರೋಲಲ್ಲಿಡ್ಬೇಕು ನೀನು...'

'ನಿಮಗೆ ಹೊಟ್ಟೆಕಿಚ್ಚಾಗ್ತಿದೆಯೇನೋ?' ಕೆಣಕಿದಳು ಮಡದಿ.

'ಹೂಂ ಮತ್ತೆ. ಈ ಮನೇಲಿ ನಿಂದೇ ರಾಜ್ಯ ಆಗ್ಬಿಟ್ಟಿದೆ. ನನ್ನ ಕೇಳೋರೇ ಇಲ್ಲ.'

'ನಿಂಗೇನಾದ್ರೂ ಬೇಕಿತ್ತೇನೋ? ಏನು ಬೇಕೂಂತ ಬಾಯ್ಬಿಟ್ಟು ಕೇಳು...'

'ತಮಾಷೆಗೆ ಹೇಳ್ದೆ ಅಪ್ಪಾ. ದೇವರು ನಿನ್ನಂಥ ಅಪ್ಪನ್ನ ಕೊಟ್ಟಿದಾನೆ. ಇನ್ನೇನು ಬೇಕು ನಂಗೆ?'

ಕಣ್ಣಲ್ಲಿ ನೀರು ಬರುವಂತಾಯ್ತು ಚಿದಾನಂದನಿಗೆ. ಈ ಸುಖಕ್ಕೆ ಯಾರ ದೃಷ್ಟಿಯೂ ಬೀಳದಿರಲಿ ಎಂದಿತು ಅಂತರಾತ್ಮ. ಹೋಂವರ್ಕ್ ಮುಗಿಸಿದ ಮೊಮ್ಮಗ ಬಂದು ತೊಡೆಯೇರಿ ಕೂತು ಕುತ್ತಿಗೆ ಬಳಸಿದಾಗ ಅವನ ಸುಳಿಗೂದಲು ಕೆನ್ನೆಗೆ ತಾಗುತ್ತಾ ಸುಖಕ್ಕೆ ಶಿಖರವಿಟ್ಟ ಅನುಭವ.

* * *

ಗೌತಮ ಒಂದನೆಯ ತರಗತಿಯಿಂದ ಎರಡನೆಯ ತರಗತಿಗೆ ಬಂದ. ಮೊಮ್ಮಗನಿಗೆ ಸ್ನಾನ ಮಾಡಿಸುವುದು, ಹೋಂವರ್ಕ್ ಮಾಡಿಸುವುದು, ಅವನ ಯೂನಿಫಾರಂಗೆ ಇಸ್ತ್ರಿ ಹಾಕಿಡುವುದು, ಸಾಕ್ಸ್ ಹಾಕಿ, ಶೂ ಕಟ್ಟಿ, ಚಿದಾನಂದ ಇವೆಲ್ಲಾ ಕೆಲಸಗಳನ್ನು ಸ್ವಸಂತೋಷದಿಂದ ವಹಿಸಿಕೊಂಡಿದ್ದ. ಬೆಳಿಗ್ಗೆ ಹೊರಡುವ ಅವಸರದಲ್ಲಿರುವ ಅವನಿಗೆ ತಿಂಡಿ ತಿನ್ನಿಸುವುದನ್ನು ಕೂಡ.

'ನೀವು ಎಲ್ಲಾ ಸೇವೆ ಮಾಡ್ತೀರಿ ಅಂತಾನೇ ಅವನು ಸೋಮಾರಿತನ ಕಲ್ತಿದಾನೆ. ಬಿಟ್ಬಿಡಿ ಮಾವ, ಅವನ ಕೆಲಸ ಮಾಡ್ಕೊಳ್ಳೋದನ್ನ ಅವನು ಕಲೀಲಿ...'

'ಕಲೀತಾನೆ ಕಣೇ. ಯಾವ ಮಹಾ ವಯಸ್ಸು ಅವನಿಗೆ?'

'ಆಹಾ, ಬಾಯಲ್ಲಿ ಬೆರಳಿಟ್ರೆ ಚೀಪೋಕೆ ಬರಲ್ಲ ನಿಮ್ಮ ಮೊಮ್ಮಗಂಗೆ. ಸ್ಕೂಲಿಗೆ ಹೊರಡಿಸೋ ಹೊತ್ತಿಗೆ ಬೇಗ.., ಬೇಗ..., ಬೇಗ...' ಅಂತ ಹೇಳಿ ಹೇಳೀನೇ ನನ್ನ ಗಂಟಲು ಒಣಗಿ ಹೋಗುತ್ತೆ. ನೀವು ಬೇರೆ ತೂಕಡಿಸೋರಿಗೆ ಹಾಸಿಗೆ ಹಾಸಿ ಕೊಡ್ತೀರಿ...'

'ಎಳೆಗರುಂ ಎತ್ತಾಗದೇ...' ತಾನೂ ತಮಾಷಿಯಾಗಿ ಹೇಳಿದ ಚಿದಾನಂದ.

ಮಾವ, ಸೊಸೆ ವಿರಾಮವಾಗಿ ಡೈನಿಂಗ್ ಟೇಬಲಿನ ಎದುರು ಕೂತು ತಿಂಡಿ ತಿನ್ನುವ, ಲೋಕಾಭಿರಾಮದ ಮಾತಾಡುವ ಸಮಯ ಅದು. ಭಾರ್ಗವ ಆಫೀಸಿಗೆ, ಗೌತಮ ಸ್ಕೂಲಿಗೆ ಹೋದ ಮೇಲೆ ಯಥಾಸಾಂಗವಾಗಿ ನಡೆಯುತ್ತಿತ್ತು ತಿಂಡಿಯ ಕಲಾಪ. ದೋಸೆ ಗೀಸೆ ಆದರೆ ಮಾವ ತಿನ್ನುತ್ತಿದ್ದ ಹಾಗೆ ಬಿಸಿಬಿಸಿಯಾಗಿ ಮಾಡಿ ತಟ್ಟೆಗೆ ಹಾಕುತ್ತಿದ್ದಳು ಶೀಲಾ. ಅವನು ತಿನ್ನುವುದಾದರೂ ಎಷ್ಟು? ಹೆಚ್ಚೆಂದರೆ ಎರಡು. ಸೊಸೆಯ ಪ್ರೀತಿಪೂರ್ವಕ ಆದರವೂ ಸೇರಿಕೊಂಡು ತಿನ್ನುವ ತಿಂಡಿಗೆ ಇಮ್ಮಡಿ ರುಚಿ. 'ಎಳೆಗರು ಎತ್ತಾಗುವ' ಮಾತು ಮಾವನ ಬಾಯಿಂದ ಉದುರಿದಾಗ ಯಾಕೋ ಶೀಲಾಳ ಮುಖ ಸಪ್ಪಗಾಯ್ತು. ಅವಳ ಎದುರಿನ ಕುರ್ಚಿಯಲ್ಲಿ ಕೂತು ತಿಂಡಿ ತಿನ್ನುತ್ತಿದ್ದ ಚಿದಾನಂದನಿಗೆ ಹಾಗೆನಿಸಿತು. ವರ್ಷಾನುಗಟ್ಟಲೆಯ ಬಳಕೆಯಿಂದ ಮಾವ, ಸೊಸೆ ಒಬ್ಬರನ್ನೊಬ್ಬರು ಎಷ್ಟು ಅರ್ಥ ಮಾಡಿಕೊಂಡಿದ್ದರು ಅಂದರೆ ಒಬ್ಬರ ಮುಖದ ಗೆರೆ ಕೊಂಚ ಅತ್ತಿತ್ತಾದರೂ ಇನ್ನೊಬ್ಬರಿಗೆ ಗೊತ್ತಾಗಿ ಬಿಡುತ್ತಿತ್ತು.

'ಯಾಕೆ ಮಾತು ನಿಲ್ಲಿಸ್ಬಿಟ್ಟೆ? ಏನೋ ಚಿಂತೆ ಮಾಡ್ತಿದ್ದಿ?'

'ಏನಿಲ್ಲ ಮಾವ'.

'ಪರವಾಗಿಲ್ಲ, ಹೇಳು...'

'ನಿಮ್ಮ ಮೊಮ್ಮಗ ಇನ್ನೂ ಎರಡನೇ ಕ್ಲಾಸಿಗೆ ಬಂದಿದಾನೆ. ಈಗ್ಲೇ ಇಷ್ಟೊಂದು ಫೀಸು, ಯೂನಿಫಾರಂ, ಶೂಸು, ಬುಕ್ಸು, ರಿಕ್ಷಾ ಅಂತ ಸಾವಿರಗಟ್ಲೆ ಖರ್ಚು'

'ಕಾಲ ಹಾಗಾಗಿದೆ ಕಣೇ. ರೇಸ್‌ನಲ್ಲಿ ಓಡಬೇಕಾದ್ರೆ ನಾವೂ ಸಿದ್ಧ ಆಗಿರ್ಬೇಕು'.

'ಮುಂದೆ ಎಂಜಿನಿಯರೋ, ಡಾಕ್ಟ್ರೋ ಆಗ್ಲಿ ಅಂತ ನಾವು ಆಸೆಪಟ್ರೆ ಅದು ಸಾಧ್ಯನಾ ಮಾವ? ನೆನೆಸ್ಕೊಂಡ್ರೆ ಹೆದರಿಕೆ ಆಗುತ್ತೆ...'

'ಮೆರಿಟ್ ಸೀಟು ತಗೊಂಡ್ರೆ ಕಷ್ಟ ಆಗಲ್ಲ ಕಣೇ'.

'ತಗೋಬೇಕಲ್ಲ?'

'ಹುಚ್ಚಿ ಎಲ್ಲೋ. ಈಗ್ಲಿಂದ ಯಾಕೆ ಚಿಂತೆ ಮಾಡ್ತಿದ್ದಿ? ಆ ಕಾಲ ಬಂದಾಗ ನೋಡ್ಕೊಂಡ್ರಾಯ್ತು'.

'ಕಾಲಕ್ಕೇನಂತೆ, ಓಡ್ತಾನೇ ಇರುತ್ತೆ. ನಂಗೆ ಒಂದೇ ಹೆದ್ರಿಕೆ..'

'...'

'ಇಷ್ಟೊಂದು ಕಷ್ಟಪಟ್ಟು, ಜೀವಮಾನ ಇಡೀ ದುಡಿದಿದ್ದು ಹಾಕಿ, ನೀವು ದೊಡ್ಡ ಆಸ್ತಿ ಮಾಡಿಟ್ಟಿದೀರಿ. ಅದನ್ನ ಉಳಿಸ್ಕೊಳ್ಳೋ ಯೋಗ್ಯತೆ ನಮಗೆ ಇರುತ್ತಾ ಅಂತ?'

'ಬಿಡ್ತು ಅನ್ನು. ಅಪಶಕುನದ ಮಾತಾಡ್ಬೇಡ'.

'ಅಪಶಕುನ ಅಲ್ಲ ಮಾವ. ವಾಸ್ತವದ ಮಾತಾಡ್ತಿದೀನಿ. ನಿಮ್ಮ ಮಗ ಎಷ್ಟು ಬುದ್ಧಿವಂತ್ರು ಅಂತ ನಿಮಗೇ ಗೊತ್ತಿದೆ. ಮೊಮ್ಮಗನೂ ಹಾಗೇ ಆದ್ರೆ'

ನಕ್ಕುಬಿಟ್ಟ ಚಿದಾನಂದ.

'ನೀನು ಬುದ್ಧಿವಂತೆ ತಾನೇ? ನಿನ್ನ ಮಗ ನಿನ್ನ ಹಾಗೆ ಆಗಲ್ಲ ಅಂತಿದೀಯಾ?'

'ತಮಾಷಿ ಮಾಡ್ತಿದೀರಿ ಮಾವ. ನಾನೆಲ್ಲಿ ಬುದ್ಧಿವಂತೆ ಅಂತ ಬೋರ್ಡ್ ಹಾಕ್ಕೊಂಡಿದೀನಿ? ಬುದ್ಧಿವಂತೆ ಆಗಿದ್ರೆ ಚೆನ್ನಾಗಿ ಓದಿ ಒಂದು ಕೆಲಸ ಹುಡುಕ್ಕೋತಿರ್ಲಿಲ್ವಾ?'

'ಮತ್ತೆ ನನ್ನ ಮಗನ್ನ ಆಡ್ಕೋತಿದ್ದಿ, ಅವನ ಸಂಪಾದನೆ ಸಾಲದು ಅಂತ'

'ಸಿಟ್ಟು ಬಂತಾ ನಿಮ್ಗೆ?'

'ಸಿಟ್ಟಲ್ಲ ಕಣೇ. ಒಬ್ಬೊಬ್ರ ಬುದ್ಧಿಮಟ್ಟ ಒಂದೊಂದು ಥರ ಇರುತ್ತೆ. ಏನ್ಮಾಡೋಕಾಗುತ್ತೆ?'

'ಅದಕ್ಕೇ ಹೇಳ್ತಿದ್ದಿದ್ದು ಮಾವ. ನಾಳೆ ನಮ್ಮ ಗೌತಮ ಎಂಜಿನಿಯರೋ, ಡಾಕ್ಟ್ರೋ ಆಗ್ಲಿ ಅಂತ ನಾವು ಕನಸು ಕಾಣೋದೇ ತಪ್ಪು ಅಲ್ವಾ?'

'ಆಗ್ಲಿಲ್ಲ ಅಂದ್ಕೋ, ಏನಾಗುತ್ತೆ? ಹುಟ್ಟಿಸಿದ ದೇವ್ರು ಹುಲ್ಲು ಮೇಯ್ಸಲ್ಲ. ಬದುಕೋಕೆ ಏನೋ ಒಂದು ದಾರಿ ಹುಡುಕ್ಕೋತಾನೆ'.

'ಏನೋ ಒಂದು ದಾರಿ ಅಂದ್ಬಿಟ್ರೆ ಸರೀನಾ? ಸಂಸಾರ ಕಟ್ಕೊಂಡ್ರೆ ತೂಗಿಸ್ಬೇಕಲ್ವಾ? ನಿಮ್ಮ ಮಗಂಗೆ ನಿಮ್ಮ ಬಲ ಇದೆ ಅಂತ ನಾವೂ ಒಂದು ಜನ ಅನ್ನಿಸ್ಕೊಂಡಿದೀವಿ. ಇಲ್ದಿದ್ರೆ...'

ಫಳಕ್ಕನೆ ಶೀಲಾ ಕಣ್ಣುಗಳಿಂದ ಕಂಬನಿ ಜಾರಿತು. ಚಿದಾನಂದನಿಗೆ ತೀರಾ ತೀರಾ ಕೆಡುಕೆನಿಸಿತು.

'ಭವಿಷ್ಯದ ಬಗ್ಗೆ ಯಾರೂ ಅತಿಯಾಗಿ ಯೋಚನೆ ಮಾಡೋಕೆ ಹೋಗ್ಬಾರ್ದು ಪುಟ್ಟೀ. ನಾಳೆ ಯಾರೋ, ನಾವು ಯಾರೋ...'

'.......'

'ಅಲ್ವೇ, ಕಾಮಧೇನು, ಕಲ್ಪವೃಕ್ಷದ ಹಾಗೆ ಎರಡು ಮನೆ ಕಟ್ಟಿಸ್ಕೊಟ್ಟಿದೀನಲ್ಲೇ? ಇರೋಕೆ ನಿಮಗೂ ಭದ್ರವಾದ ನೆಲೆ ಇದೆ. ಸುಕಾಸುಮ್ನೆ ಯಾಕೆ ಚಿಂತೆ ಹಚ್ಕೊಂಡು ಕೊರಗ್ತಿದ್ದಿ ಅಂತ ಅರ್ಥಾನೇ ಆಗಲ್ಲ ನಂಗೆ'

'ಹಾಗಲ್ಲ ಮಾವ, ನೀವು ಹಳೆಗಾಲದೋರು. ಕಾಲ ಎಷ್ಟು ಕೆಟ್ಟಿದೆ ಅಂತ ನಿಮಗೆ ಅರ್ಥ ಆಗಲ್ಲ. ಬೆಳ್ಳಗಿರೋದೆಲ್ಲಾ ಹಾಲು ಅಂದ್ಕೋತೀರಿ..'

'ಅದೇನೂಂತ ಬಾಯ್ಬಿಟ್ಟು ಹೇಳಿದ್ರೆ ನಂಗೆ ಅರ್ಥ ಆಗುತ್ತಪ್ಪಾ'

'ಬೇಡ ಬಿಡಿ. ಅಂಥ ಮಾತು ನಾನು ಆಡಲೂಬಾರ್ದು, ನೀವು ಕೇಳಲೂಬಾರ್ದು...'

'ಹೇಳು ಅಂದ್ರೆ ಹೇಳ್ಬೇಕು. ಮನಸ್ಸಲ್ಲೇ ಏನೋ